ಕೋಪ ಪುಟಿದೆದ್ದಿದೆ. 'ನನ್ನ ಲುಕ್ ತಗೊಂಡು ನೀವೇನ್ ಮಾಡ್ತಿರಾ ಸಾರ್. ಪೇಪರ್ಸ್ ಸರಿಯಾಗಿದೆಯೇನೋ ನೋಡಿ' ಅಂದವಳು ನಾನು. 'ನಿಮ್ಮ ಹಾಗೆ ನಿಮ್ಮ ವರ್ಕೂ ನೀಟ್ ಅಂಡ್ ಫೈನ್ ಬಿಡಿ' ಮತ್ತದೇ ಪ್ರಶಂಸೆ. ನಮೂನೆ ಮಾತ್ರ ಬೇರೆ. ಇನ್ನೇನು ನಾನು ಹರ್ಟಾಗಿ ಮಾತನಾಡಲು ಉದ್ಯುಕ್ತಳಾಗಿರುವಾಗಲೇ 'ಸಾರಿ ರಂಜನಿದೇವ್. ನೀವು ಸ್ಟಾಫ್‌ನವರು ದಿನವೆಲ್ಲಾ ಕಂಪ್ಯೂಟರ್ ಮುಂದೆ ಕೂತು, ಅದರಲ್ಲೇ ಕಣ್ಣು, ಮನಸ್ಸೂ ನೆಟ್ಟು ಎಸಿ ಹಾಲ್‌ನಲ್ಲೂ ಬ್ರೇನ್ ಬಿಸಿ ಮಾಡ್ಕೊಂಡಿರ್ತೀರ ಅಂತ ನಿಮ್ಮನ್ನು ಖುಷಿಪಡಿಸಲೋಸುಗ ಹಾಗೂ ಎನ್ಕರೇಜ್ ಪಾಯಿಂಟ್ ಆಫ್ ವ್ಯೂ ಆಲ್ಸೋ ನಗನಗ್ತಾ ನಾಲ್ಕು ಒಳ್ಳೆಯ ಮಾತಾಡ್ತೀನಷ್ಟೆ. ಅದರ ಹಿಂದೆ ನಿಮ್ಮಿಂದ ಹೆಚ್ಚಿನ ಕೆಲಸ ಪಡೆಯಬಹುದೆಂಬ ಸೆಲ್ಫಿಶ್ ನಾನು. ಡೋಂಟ್ ಮಿಸ್ಟೇಕ್ ಮಿ, ಪ್ಲೀಸ್' ಅಂದುಬಿಡುತ್ತಾನೆ. ಬಂದ ಕೋಪವೆಲ್ಲಾ ಕರಗಿ ಒಂತರಾ ನಿರುತ್ಸಾಹ, ನಿರಾಶೆ ಆವರಿಸಿಕೊಳ್ಳುತ್ತದೆ. ಗುರುತಿಸಿಬಿಡುತ್ತಾನೆ ಮಾರಾಯ. 'ಏಕೆ ಡಲ್ ಆಗಿಬಿಟ್ರಿ? ನಾನು ಇನ್ನು ಮೇಲೆ ಮಾತೇ ಆಡೋಲ್ಲ ಬಿಡಿ... ಓಕೆನಾ?' ಎಂದವನು ತನ್ನ ಕೈಬೆರಳುಗಳಿಂದ ಎರಡೂ ಕಿವಿಗಳನ್ನು ಹಿಡಿದುಕೊಂಡು ಕ್ಷಮೆಯ ನಾಟಕವಾಡುವಾಗ ನನಗೇ ಅರಿವಿಲ್ಲದೆ ನಗೆ ಮೂಡಿತೇನೋ. 'ಸಿಂಪ್ಲಿ ಬ್ಯೂಟಿಫುಲ್ ಹೀಗೆ ನಗನಗ್ತಾ ಇರಬೇಕೂರೀ... ದಟ್ಸ್ ಐ ವಾಂಟ್' ಅವನೂ ಜೊತೆಗೂಡಿ ನಗುವಾಗ ನಾನೇಕೆ ಅವನ ಹುಚ್ಚಾಟಕ್ಕೆ ನಕ್ಕೆನಪ್ಪಾ ಎಂದು ಒಳಗೇ ಕಳವಳಪಟ್ಟರೂ ತೋರಿಸಿಕೊಂಡರೆ ಮತ್ತಾವ ಮಾತಿನ ವರಸೆ ತೆಗೆಯುತ್ತಾನೊ ಪುಣ್ಯಾತ್ಮ... ಎಂಬ ಅಳುಕಿನಿಂದ ಹ್ಹಿಹ್ಹಿಹ್ಹಿ ಮಾಡುತ್ತೇನೆ. ಅವನ ಪ್ರಶಂಸೆ, ನನ್ನ ಬಿಗುಮಾನ, ಅದಕ್ಕೆ ಅವನ ಸಮಜಾಯಿಷಿ ನಂತರ ಪುಟಿಯುವ ಸಂತಸದ ಕ್ಷಣಗಳೂ ದಿನಗಳೆದಂತೆ ಖಿನ್ನತೆಯನ್ನುಂಟು ಮಾಡುತ್ತವೆ. ಇವನು ನನ್ನನೊಡನೆ ಮಾತ್ರ ಹೀಗೇನಾ? ಎಲ್ಲರೊಡನೆಯೂ ಇದೇ ಸ್ಟೈಲಾ? ಇವನ ಹೈಲಾಟಗಳ ಬಲೆಗೆ ಬೀಳಬಾರದೆಂದು ಒಳಗೇ ಸ್ಟ್ರಾಂಗ್ ಆಗುತ್ತೇನೆ. ಅವನ ಚೇಂಬರ್‌ಗೆ ಶೀಲಾ, ಇಂದಿರಾ, ಅದರಲ್ಲೂ ಶ್ರೀಲಕ್ಷ್ಮಿ ಹೋದಾಗಲಂತೂ ಅವರು ವಾಪಸ್ ಬರುವವರೆಗೂ ನನ್ನ ಹೊಟ್ಟೆಯಲ್ಲೆಲ್ಲಾ ಕತ್ತರಿ ಆಡಿಸಿದಷ್ಟು ಯಾತನೆ. ಬೇಗಬಂದರೆ ನಿಟ್ಟುಸಿರು. ತಡವಾದರೆ ಕೀಬೋರ್ಡ್ ಮೇಲೆ ಬೆರಳುಗಳೇ ಸ್ಥಗಿತ. ಅದೇಕೋ ಮೈಯೆಲ್ಲಾ ಬಿಸಿ. ಅಸೂಯೆ ಕೂಡ ಬೆಂಕಿ ಇದ್ದಂತೆ ಅಂತಾರೆ. ಜವಾರಿ ಭಾಷೆಯಲ್ಲಿ ಹೇಳೋದಾದ್ರೆ ಹೊಟ್ಟೆಕಿಚ್ಚು. ಇಂತಹ ಕಿಚ್ಚು ಹಚ್ಚಿದ ಅವನಿಂದ ಮಾತ್ರವೇ ತಣ್ಣಗೆ ಮಾಡಲು ಸಾಧ್ಯ. ಒಂದು ದಿನ ಮಂದಹಾಸ ಮತ್ತೊಂದು ದಿನ ಮಂಕು, ಮಗದೊಂದು ದಿನ ಕೊಂಕು. ಹೊಸ ಹೊಳಪು, ಉತ್ಸಾಹ, ಉನ್ಮಾದಗಳಿಂದ ದಿನಗಳು ಗರಿಗೆದರುತ್ತವೆ. ನಾನಂತೂ ಅವನ ಕೈನಲ್ಲಿನ ಕಂಪ್ಯೂಟರ್ ಮೌಸ್ ಆಗುತ್ತೇನೆ.

★★★

ಮರೆಯದೆ ತುಟಿಗಳಲ್ಲಿ ನಗು ತುಳುಕಿಸುತ್ತಲೇ ಒಳಗಡಿಯಿಡುತ್ತೇನೆ. ಮೌನವಾಗಿ ನನ್ನೊಮ್ಮೆ ಅವಲೋಕಿಸಿ ಪೇಪರ್‌ಗಳಿಗೆ ಚಕಚಕನೆ ಸಹಿ ಮಾಡುತ್ತಾನೆ. ಫೈಲ್ ಎತ್ತಿಕೊಂಡು ಹೊರಡುತ್ತೇನೆ. 'ಒಂದ್ನಿಮಿಷ' ಎಂದು ತಡೆಯುತ್ತಾನೆ. 'ಆರ್ ಯು ಆಲ್‌ರೈಟ್?' ಕಣ್ಣಲ್ಲಿ ಕಣ್ಣಿಡುತ್ತಾನೆ. ಸಂಕೋಚದಿಂದ ಹಿಡಿಯಷ್ಟಾಗುತ್ತೇನೆ. 'ನನಗೇನಾಗಿದೆ ಸಾರ್... ಚೆನ್ನಾಗಿದ್ದೇನೆ' ಅನ್ನುವಾಗ ಚೇರ್‌ಬಿಟ್ಟು ಬಳಿ ಬರುತ್ತಾನೆ. ಎಲ್ಲಿಯ ಗ್ರಹಚಾರವಪ್ಪ ಎಂದು ತಟ್ಟನೆ ಮೈತುಂಬಾ ಸೆರಗು ಹೊದ್ದು, 'ಸ್ವಲ್ಪ ಹೆಡ್‌ಏಕ್ ಅಷ್ಟೆ' ಅಂದುಬಿಡುತ್ತೇನೆ. 'ನನ್ನ ಗೆಸ್ಸು ಯಾವತ್ತು ಮಿಸ್ ಆಗೋದಿಲ್ಲಾರೀ... ಇಲ್ಲಿ ಹೆವಿ ಡ್ಯೂಟಿ ಅಲ್ವೆ?' ವ್ಯಸನ ಪಡುತ್ತಾನೆ. ನನ್ನದು ಮೌನ. 'ಪಾಪ, ನೀವು ಹೆಣ್ಣುಮಕ್ಕಳು ಮನೇಲೂ ದುಡಿಯಬೇಕು. ಹೊರಗೂ ದುಡಿಬೇಕು. ಐ ಕೆನ್